ಕನ್ನಡ ಪ್ರಭಾ / ಬೆಲಗಾಮ
KANNADA PRABHA/BELGAUM
03 APR 2018

(1)

### ಸೋಲಾರ್ ಪ್ಯಾನಲ್ ಅಳವಡಿಸಿಕೊಳ್ಳುವ ಮೂಲಕ ವಿದ್ಯುತ್ ಉತ್ಪಾದಿಸುತ್ತಿದೆ ಹುಬ್ಬಳ್ಳಿ ರೈಲ್ವೆ

# ಸೌರವಿದ್ಯುತ್ ಸ್ವಾವಲಂಬನೆಯತ್ತ ರೈಲ್ವೆ ಇಲಾಖೆ

• **ಶಿವಾನಂದ ಗೊಂಬಿ** ಹುಬ್ಬಳ್ಳಿ

ವಿದ್ಯುತ್ ಸಮಸ್ಯೆಗೆ ಮುಕ್ತಿ ಕಾಣುವ ಉದ್ದೇಶದಿಂದ ರೈಲ್ವೆ ಇಲಾಖೆಯೂ ಸೌರಶಕ್ತಿ ಮೊರೆ ಹೋಗಿದೆ. ಇದರೊಂದಿಗೆ ವಿದ್ಯುತ್‌ಗಾಗಿ ಖರ್ಚು ಮಾಡುವ ವೆಚ್ಚವೂ ಕಡಿತವಾಗಿ ಲಕ್ಷಾಂತರ ರೂ. ಉಳಿತಾಯವಾಗುತ್ತಿದೆ. 2017ರ ಜನವರಿಯಿಂದ ಸೋಲಾರ್ ಶಕ್ತಿಗೆ ಮೊರೆ ಹೋಗಿರುವ ರೈಲ್ವೆ ಇಲಾಖೆ ಈವರೆಗೆ ಒಟ್ಟು 1.91 ಲಕ್ಷ ಯುನಿಟ್ ವಿದ್ಯುತ್ ಉತ್ಪಾದಿಸಿದೆ.

ರೈಲ್ವೆ ಇಲಾಖೆ ಆಡಳಿತ ಕಟ್ಟಡ, ವರ್ಕ್‌ಶಾಪ್, ರೈಲ್ವೆ ನಿಲ್ದಾಣ, ಲೇವಲ್ ಕ್ರಾಸಿಂಗ್ ಗೇಟ್ ಸೇರಿದಂತೆ ಎಲ್ಲೆಡೆ ಸೋಲಾರ ವಿದ್ಯುತ್ ಬಳಕೆಗೆ ನೈರುತ್ಯ ರೈಲ್ವೆ ಮುಂದಾಗಿದೆ. ಸದ್ಯ ಹುಬ್ಬಳ್ಳಿಯಲ್ಲಿರುವ ನೈರುತ್ಯ ರೈಲ್ವೆ ವಲಯದ ಕೇಂದ್ರ ಕಚೇರಿಯಾದ ರೈಲ್ ಸೌಧ, ಹುಬ್ಬಳ್ಳಿ ವರ್ಕ್‌ಶಾಪ್ ಹಾಗೂ ಬೆಂಗಳೂರಿನ ಡಿಆರ್‌ಎಂ ಕಚೇರಿಗಳಲ್ಲಿ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಲಾಗಿದೆ.

**ಎಲ್ಲೆಲ್ಲಿ ಎಷ್ಟೆಷ್ಟು?:** ಸೋಲಾರ್ ಪ್ಯಾನಲ್ ಅಳವಡಿಕೆಯಲ್ಲೂ ಎರಡು ರೀತಿ ವಿಧಾನಗಳನ್ನು ರೈಲ್ವೆ ಇಲಾಖೆ ಅನುಸರಿಸಿದೆ. ಒಂದು ಡಿಪಾರ್ಟ್‌ಮೆಂಟಲ್, ಇನ್ನೊಂದು ಡೆವಲಪರ್ ಮಾದರಿಯಲ್ಲಿ. ಡಿಪಾರ್ಟ್‌ಮೆಂಟಲ್ ಎಂದರೆ ಇಲಾಖೆಯೇ ತಾನೇ ಖರ್ಚು ಮಾಡಿ ಸೋಲಾರ್ ಪ್ಯಾನಲ್ ಅಳವಡಿಸಿ ಅದನ್ನು ಇಲಾಖೆಗೆ ಬಳಸಿಕೊಳ್ಳುವುದಾಗಿದೆ. ಇನ್ನು ಡೆವಲಪರ್ ಮಾದರಿಯೆಂದರೆ ಬೇರೆ ಸಂಸ್ಥೆಗೆ ಇಲಾಖೆಯ ಜಾಗೆಯನ್ನು ನೀಡುವುದು. ಆ ಸಂಸ್ಥೆ ಅಲ್ಲಿ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಿ ವಿದ್ಯುತ್ ತಯಾರಿಸುತ್ತದೆ. ಅದನ್ನು ರೈಲ್ವೆ ಇಲಾಖೆ ಸಂಸ್ಥೆಯಿಂದ ಖರೀದಿಸಿ ವಿದ್ಯುತ್ ಬಳಸಿಕೊಳ್ಳುವುದಾಗಿದೆ.

ಹುಬ್ಬಳ್ಳಿಯ ರೈಲ್ ಸೌಧ, ವರ್ಕ್‌ಶಾಪ್ ಹಾಗೂ ಬೆಂಗಳೂರಿನ ವಿಭಾಗೀಯ ಕಚೇರಿ ಮೇಲೆ ಪ್ರಾಯೋಗಿಕವಾಗಿ ಇಲಾಖೆಯೇ ಸೋಲಾರ್ ಪ್ಯಾನಲ್ ಅಳವಡಿಸಿ ವಿದ್ಯುತ್ ಉತ್ಪಾದಿಸುತ್ತಿದೆ. ಮೂರು ಕಡೆ ಒಟ್ಟು 165 ಕಿಲೋವ್ಯಾಟ್ ಪಿಕ್ ಸಾಮರ್ಥ್ಯದ (ಕೆಡಬ್ಲುಪಿ) ಸೋಲಾರ್ ಪ್ಯಾನಲ್ ಅಳವಡಿಸಿದೆ. ಹುಬ್ಬಳ್ಳಿ ರೈಲ್ ಸೌಧದ ಕಟ್ಟಡದ ಮೇಲೆ 100 ಕೆಡಬ್ಲುಪಿ ಸೋಲಾರ್ ಪ್ಯಾನಲ್‌ಗಳನ್ನು 2017ರ



KP

ರೈಲ್ವೆ ಇಲಾಖೆಯ ಕಟ್ಟಡಗಳ ಮೇಲೆ ಸೋಲಾರ್ ಪ್ಯಾನಲ್.

ಜನವರಿಯಲ್ಲಿ ಅಳವಡಿಸಿದೆ. ಇದಕ್ಕಾಗಿ ರೈಲ್ವೆ ಇಲಾಖೆ ₹ 76 ಲಕ್ಷ ಖರ್ಚು ಮಾಡಿದೆ. ಕಳೆದ ಏಪ್ರಿಲ್‌ನಿಂದ 2018ರ ಫೆಬ್ರವರಿವರೆಗೆ ಇಲ್ಲಿ 1.17 ಲಕ್ಷ ಯುನಿಟ್ ವಿದ್ಯುತ್‌ನ್ನು ಉತ್ಪಾದಿಸಿದೆ. ಈ ಅವಧಿಯಲ್ಲಿ ಈ ಕಟ್ಟಡಕ್ಕೆ ಒಟ್ಟು 5.27 ಲಕ್ಷ ಯುನಿಟ್ ವಿದ್ಯುತ್ ಬಳಕೆಯಾಗಿದೆ. ಇದರಿಂದಾಗಿ ಶೇ.22ರಷ್ಟು ವಿದ್ಯುತ್‌ನ್ನು ಇದು ಸೋಲಾರ್ ಶಕ್ತಿಯಿಂದಲೇ ಬಳಕೆ ಮಾಡಿಕೊಂಡಿದೆ.

ಇನ್ನು ಹುಬ್ಬಳ್ಳಿ ವರ್ಕಶಾಪ್‌ನಲ್ಲಿ 45 ಕೆಡಬ್ಲುಪಿ ಸಾಮರ್ಥ್ಯದ ಸೋಲಾರ್ ಪ್ಯಾನಲ್ ಅಳವಡಿಸಿದ್ದು, ಇದಕ್ಕೆ ₹ 35 ಲಕ್ಷ ಖರ್ಚು ಮಾಡಿದೆ. ಇಲ್ಲಿ 51 ಸಾವಿರ ಯುನಿಟ್ ವಿದ್ಯುತ್ ಉತ್ಪಾದಿಸಿದೆ. ಬೆಂಗಳೂರಿನ ವಿಭಾಗೀಯ ಕಚೇರಿಯ ಮೇಲೆ 20 ಕೆಡಬ್ಲುಪಿ ಸಾಮರ್ಥ್ಯದ ಸೋಲಾರ್ ಪ್ಯಾನಲ್‌ಗಳನ್ನು ಅಳವಡಿಸಿ 23 ಸಾವಿರ ಯುನಿಟ್ ವಿದ್ಯುತ್ ಉತ್ಪಾದಿಸಿದೆ. ಒಟ್ಟು ಈ ಮೂರು ಕೇಂದ್ರಗಳಿಂದ 1.91 ಲಕ್ಷ ಯುನಿಟ್ ಉತ್ಪಾದಿಸಿದಂತಾಗಿದೆ.

**ಡೆವಲಪರ್ ಮಾದರಿ:** ಇನ್ನು ಮೈಸೂರಿನ ಸೆಂಟ್ರಲ್ ವರ್ಕ್‌ಶಾಪ್‌ನಲ್ಲಿ 500 ಕೆಡಬ್ಲುಪಿ, ಬೆಂಗಳೂರು ರೈಲ್ವೆ ನಿಲ್ದಾಣ 180 ಕೆಡಬ್ಲುಪಿ, ಬೆಂಗಳೂರಿನ ರೈಲ್ವೆ ಆಸ್ಪತ್ರೆ 100, ಯಶವಂತಪುರ ರೈಲು ನಿಲ್ದಾಣದಲ್ಲಿ 80 ಕೆಡಬ್ಲುಪಿ, ಮೈಸೂರು ರೈಲ್ವೆ ನಿಲ್ದಾಣದಲ್ಲಿ 210 ಕೆಡಬ್ಲುಪಿ ಸಾಮರ್ಥ್ಯದ ಸೋಲಾರ್ ಪ್ಯಾನಲ್‌ಗಳನ್ನು ಡೆವಲಪರ್ ಮಾದರಿಯಲ್ಲಿ ಅಳವಡಿಸಲಾಗಿದೆ. ಇಲ್ಲಿ ಪ್ರಾಯೋಗಿಕವಾಗಿ ವಿದ್ಯುತ್ ಉತ್ಪಾದನೆ ನಡೆದಿದೆ.

ಹುಬ್ಬಳ್ಳಿ ವರ್ಕ್‌ಶಾಪ್ 1000 ಕೆಡಬ್ಲುಪಿ, ಹುಬ್ಬಳ್ಳಿ ರೈಲ್ವೆ ನಿಲ್ದಾಣ 22 ಕೆಡಬ್ಲುಪಿ, ಹುಬ್ಬಳ್ಳಿ ವಿಭಾಗೀಯ ಕಚೇರಿ 320 ಕೆಡಬ್ಲುಪಿ, ರೈಲ್ವೆ ಆಸ್ಪತ್ರೆ 100 ಕೆಡಬ್ಲುಪಿ ಸಾಮರ್ಥ್ಯದ ಸೋಲಾರ್ ಪ್ಯಾನಲ್ ಅಳವಡಿಕೆಗೆ ಸಂಸ್ಥೆಗಳಿಗೆ ವಹಿಸಲಾಗಿದೆ. ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದಿಂದ ಅನುಮತಿ ಸಿಗಬೇಕಿದೆ. ಇದು ಸಿಕ್ಕ ಬಳಿಕ ಇಲ್ಲಿಯೂ ವಿದ್ಯುತ್ ಉತ್ಪಾದನೆಯಾಗಲಿದೆ ಎಂದು ಮೂಲಗಳು ತಿಳಿಸುತ್ತವೆ.

ಹುಬ್ಬಳ್ಳಿಯಲ್ಲಿರುವ ಇಎಂಡಿ ಶೆಡ್‌ನಲ್ಲಿ 640 ಕೆಡಬ್ಲುಪಿ, ಬೆಳಗಾವಿ, ಗದಗ, ಬಳ್ಳಾರಿ ರೈಲು ನಿಲ್ದಾಣಗಳಲ್ಲಿ ತಲಾ 120 ಕೆಡಬ್ಲುಪಿ ಸಾಮರ್ಥ್ಯದ ಸೋಲಾರ್ ಪ್ಯಾನಲ್ ಅಳವಡಿಕೆ ಕಾರ್ಯ ಪ್ರಗತಿಯಲ್ಲಿದೆ. ಈ ಎಲ್ಲೆಡೆ ಜೂನ್ ಅಥವಾ ಜುಲೈನಲ್ಲಿ ಕೆಲಸಗಳೆಲ್ಲ ಪೂರ್ತಿ ಮುಗಿದು ವಿದ್ಯುತ್ ಉತ್ಪಾದನೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆಯ ಮೂಲಗಳು ತಿಳಿಸಿವೆ.

ರೈಲ್ವೆ ಇಲಾಖೆಗೆ ತನಗೆ ಬೇಕಾದ ವಿದ್ಯುತ್‌ನ್ನು ವಿದ್ಯುಚ್ಛಕ್ತಿ ಮಂಡಳಿಯಿಂದ ಪ್ರತಿಯುನಿಟ್‌ಗೆ ₹ 8.25ಗೆ ಖರೀದಿಸುತ್ತಿದೆ. ಸೋಲಾರ್ ವಿದ್ಯುತ್ ಉತ್ಪಾದನೆಗೆ ಗುತ್ತಿಗೆ ನೀಡಿರುವ ಸಂಸ್ಥೆಗಳಿಂದ ಇದಕ್ಕಿಂತ ಕಡಿಮೆ ದರದಲ್ಲಿ ಪ್ರತಿಯುನಿಟ್‌ಗೆ ಕೆಲ ಸಂಸ್ಥೆಗಳಿಂದ ₹ 5.68, ಇನ್ನು ಕೆಲ ಸಂಸ್ಥೆಗಳಿಂದ ₹ 4.98, ಕೆಲ ಸಂಸ್ಥೆಗಳಿಂದ ₹ 3.8ಗೆ ಖರೀದಿಸಲಾಗುವುದು. ಇದರಿಂದ ಇಲಾಖೆಗೆ ವಿದ್ಯುತ್ ಸಮಸ್ಯೆಯೂ ಎದುರಾಗಲ್ಲ. ಜತೆಗೆ ವೆಚ್ಚದಲ್ಲೂ ಸಾಕಷ್ಟು ಉಳಿತಾಯವಾಗುತ್ತದೆ ಎಂಬುದು ಹಿರಿಯ ಅಧಿಕಾರಿಗಳ ಅಂಬೋಣ.

## ₹76 ಲಕ್ಷ ವೆಚ್ಚ

- ಹುಬ್ಬಳ್ಳಿಯ ರೈಲ್ ಸೌಧ, ವರ್ಕ್‌ಶಾಪ್ ಹಾಗೂ ಬೆಂಗಳೂರಿನ ವಿಭಾಗೀಯ ಕಚೇರಿ ಮೇಲೆ ಸೋಲಾರ್ ವಿದ್ಯುತ್ ಉತ್ಪಾದನೆ
- ಮೂರು ಕಡೆ ಒಟ್ಟು 165 ಕಿಲೋವ್ಯಾಟ್ ಪಿಕ್ ಸಾಮರ್ಥ್ಯದ (ಕೆಡಬ್ಲುಪಿ) ಸೋಲಾರ್ ಪ್ಯಾನಲ್ ಅಳವಡಿಕೆ
- ರೈಲ್ವೆ ಇಲಾಖೆ ₹ 76 ಲಕ್ಷ ಖರ್ಚು ಮಾಡಿದೆ. ಕಳೆದ ಏಪ್ರಿಲ್‌ನಿಂದ 2018ರ ಫೆಬ್ರವರಿವರೆಗೆ ಇಲ್ಲಿ 1.17 ಲಕ್ಷ ಯುನಿಟ್ ವಿದ್ಯುತ್ ಉತ್ಪಾದನೆ

## ಎಷ್ಟು ಬೇಕು ವಿದ್ಯುತ್

ನೈರುತ್ಯ ರೈಲ್ವೆ ವಲಯಕ್ಕೆ ಒಂದು ವರ್ಷಕ್ಕೆ 43 ಮಿಲಿಯನ್ ಯುನಿಟ್ ವಿದ್ಯುತ್ ಬೇಕಾಗುತ್ತದೆ. ಅದರಲ್ಲಿ ಸೋಲಾರ್ ಶಕ್ತಿಯಿಂದಲೇ 7 ಮಿಲಿಯನ್ ವಿದ್ಯುತ್ ಯುನಿಟ್ ಸಿಗುವ ಸಾಧ್ಯತೆ ಇದೆ. ಅಂದರೆ ಶೇ. 16ರಿಂದ 18ರವರೆಗೆ ವಿದ್ಯುತ್‌ನ್ನು ಉಳಿತಾಯ ಮಾಡಿದಂತಾಗಿದೆ. ಒಟ್ಟಿನಲ್ಲಿ ರೈಲ್ವೆ ಇಲಾಖೆ ಸೋಲಾರ ಶಕ್ತಿಯನ್ನು ಸಮರ್ಥವಾಗಿ ಬಳಸಿಕೊಳ್ಳುವಲ್ಲಿ ಯಶಸ್ವಿಯಾಗುತ್ತಿದ್ದು, ಇತರೆ ಇಲಾಖೆಗಳಿಗೆ ಮಾದರಿಯಾಗಿ ನಿಂತಿದೆ ಎಂದರೆ ತಪ್ಪಾಗಲಾರದು.

By installing Solar pannels Railway is generating Electric power. Railway has spent 76 lakhs. Railway has installed Solar pannels at Rail soudha, workshop & DRM office at Blr. totaling 165 KWP. From April 2017 to Feb 2018 1.17 lakh unit is generated.

विजय कर्नाटक/हुबली
VIJAYA KARNATAKA/HUBLI.
03 APR 2018

# ರೈಲ್ವೆ ನಿಲ್ದಾಣದಲ್ಲಿ ಕೈಕೊಟ್ಟ ವಿದ್ಯುತ್

## ಒಂದೂವರೆ ಗಂಟೆ ಕಗ್ಗತ್ತಲಲ್ಲೇ ಕಳೆದ ಪ್ರಯಾಣಿಕರು



ವಿದ್ಯುತ್ ಪೂರೈಕೆ ಸ್ಥಗಿತದಿಂದಾಗಿ ಕತ್ತಲಲ್ಲಿ ಹುಬ್ಬಳ್ಳಿ ರೈಲ್ವೆ ನಿಲ್ದಾಣ.

**ವಿಕ ಸುದ್ದಿಲೋಕ** ಹುಬ್ಬಳ್ಳಿ

ನೈರುತ್ಯ ರೈಲ್ವೆ ಕೇಂದ್ರ ಸ್ಥಾನ ಹೊಂದಿರುವ ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ವಿದ್ಯುತ್ ಕೈಕೊಟ್ಟು ಪ್ರಯಾಣಿಕರು ಪರದಾಡಿದ ಪ್ರಸಂಗ ಸೋಮವಾರ ನಡೆದಿದೆ. ಇದರಿಂದ ನಿಲ್ದಾಣದ ಹೊರ ಆವರಣದಲ್ಲಿ ಸಂಪೂರ್ಣ ಕತ್ತಲು ಆವರಿಸಿತ್ತು.

ಸಂಜೆ 6.30ರಿಂದ ರಾತ್ರಿ 8 ಗಂಟೆ ವರೆಗೆ ಬರೋಬ್ಬರಿ ಒಂದೂವರೆ ತಾಸು ವಿದ್ಯುತ್ ಕಡಿತಗೊಂಡಿದ್ದರಿಂದ ಪ್ರಯಾಣಿಕರು ಅಕ್ಷರಶಃ ಕಂಗಾಲಾಗಿದ್ದರು.

ಆದರೆ, ರೈಲ್ವೆ ಪ್ಲಾಟ್‌ಫಾರಂ, ಟಿಕೆಟ್ ವಿತರಣೆ, ಪಾರ್ಸೆಲ್ ಸೇರಿದಂತೆ ಇತರೆ ಯಾವುದೇ ಚಟುವಟಿಕೆಗಳಿಗೆ ತೊಂದರೆಯಾಗಿಲ್ಲ ಎಂದು ಮೂಲಗಳು ತಿಳಿಸಿವೆ. ವಿದ್ಯುತ್ ಪೂರೈಕೆ ಸ್ಥಗಿತಗೊಂಡ ತಕ್ಷಣ ಪರ್ಯಾಯವಾಗಿ ಜನರೇಟರ್ ಮೂಲಕ ವಿದ್ಯುತ್ ಸರಬರಾಜು ಮಾಡಲಾಗುತ್ತಿತ್ತು. ಜನರೇಟರ್ ಕೈಕೊಟ್ಟಿತ್ತು. ಇದನ್ನು ದುರಸ್ತಿ ಮಾಡಿ ಪುನಃ ವಿದ್ಯುತ್ ಪೂರೈಸುವ ಹೊತ್ತಿಗೆ ರಾತ್ರಿ 8ಗಂಟೆ ಆಗಿತ್ತು ಎಂದು ಪ್ರಯಾಣಿಕರು ಮಾತಾಡಿಕೊಳ್ಳುತ್ತಿದ್ದರು. ಆಟೊ ನಿಲ್ದಾಣದ ಭಾಗದಲ್ಲಿ ಮಾತ್ರ ಕರೆಂಟ್ ಸಮಸ್ಯೆ ಆಗಿತ್ತು. ಆಟೊದವರು ತಕ್ಷಣ ಮಾಹಿತಿ ನೀಡದ್ದರಿಂದ ವಿದ್ಯುತ್ ಪೂರೈಕೆಯಲ್ಲಿ ವಿಳಂಬವಾಗಿದೆ ಎಂದು ವಲಯದ ಸಾರ್ವಜನಿಕ ಮುಖ್ಯಸಂಪರ್ಕಾಧಿಕಾರಿ ಇ. ವಿಜಯಾ ತಿಳಿಸಿದ್ದಾರೆ.

प्रजा वाणी/हुबली
PRAJA VANI/HUBLI.
03 APR 2018



ಹುಬ್ಬಳ್ಳಿಯ ರೈಲು ನಿಲ್ದಾಣದ ಮುಂಭಾಗದಲ್ಲಿ ದೀಪಗಳು ಹೊತ್ತಿಕೊಳ್ಳದೇ ಇರುವುದರಿಂದ ಇಡೀ ವಾತಾವರಣ ಕತ್ತಲಲ್ಲಿ ಮುಳುಗಿತ್ತು

# ಕಗ್ಗತ್ತಲಲ್ಲಿ ಹುಬ್ಬಳ್ಳಿ ರೈಲು ನಿಲ್ದಾಣ ಆವರಣ

ಹುಬ್ಬಳ್ಳಿ: ನಗರ ರೈಲು ನಿಲ್ದಾಣ ಮುಂಭಾಗದಲ್ಲಿ ದೀಪಗಳನ್ನು ಸೋಮವಾರ ಸಂಜೆ ಹಚ್ಚದೇ ಇದ್ದುದರಿಂದ ಎರಡೂವರೆ ತಾಸಿಗೂ ಹೆಚ್ಚು ಕಾಲ ಇಡೀ ಪ್ರದೇಶ ಕಗ್ಗತ್ತಲಿಂದ ಕೂಡಿತ್ತು.

ರೈಲುಗಳನ್ನು ಹಿಡಿಯಲು ಜಿಲ್ಲೆಯ ವಿವಿಧೆಡೆಗಳಿಂದ ಬರುವ ಪ್ರಯಾಣಿಕರಿಗೆ ಇದರಿಂದಾಗಿ ಸಾಕಷ್ಟು ತೊಂದರೆಯಾಯಿತು ಎಂದು ಉದ್ಯಮಿ ರಮೇಶ ಬಾಫಣಾ ದೂರಿದರು.

‘ಏಕೆ ಕತ್ತಲಾಗಿದೆ ಎಂದು ವಿಚಾರಿಸಿದಾಗ ರೈಲ್ವೆ ನಿಲ್ದಾಣದ ಎಲೆಕ್ಟ್ರಿಕ್ ಸಿಬ್ಬಂದಿ ಸ್ವಿಚ್ ಹಾಕುವುದನ್ನು ಮರೆತಿದ್ದರು’ ಎಂದು ಅಧಿಕಾರಿಗಳು ಸಮಜಾಯಿಷಿ ನೀಡಿದ್ದಾರೆ. ಇಷ್ಟೊಂದು ಹೊಣೆಗೇಡಿತನ ಮಾಡಿದರೆ ಹೇಗೆ’ ಎಂದು ಅವರು ಖಾರವಾಗಿ ಪ್ರಶ್ನಿಸಿದರು.

‘ನಾನು ಸಂಜೆ 7ಕ್ಕೆ ನಿಲ್ದಾಣಕ್ಕೆ ಹೋಗಿದ್ದೆ. 8.15ರವರೆಗೂ ವಿದ್ಯುತ್ ದೀಪಗಳು ಹೊತ್ತಿಕೊಂಡಿರಲಿಲ್ಲ. ಈ ಬಗ್ಗೆ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕರು, ವಿಭಾಗೀಯ ರೈಲ್ವೆ ವ್ಯವಸ್ಥಾಪಕರು, ರೈಲ್ವೆ ಸಚಿವರ ಆಪ್ತ ಸಹಾಯಕರಿಗೆ ಮೊಬೈಲ್ ಸಂದೇಶ ಕಳಿಸಿದ್ದೇನೆ’ ಎಂದರು.

विजयवाणी / हूबल्लि
Vijay Vani/ Hubli
03 APR 2018

# ಹುಬ್ಬಳ್ಳಿ ರೈಲ್ವೆ ನಿಲ್ದಾಣದಲ್ಲಿ ವಿದ್ಯುತ್ ಕಣ್ಣಾಮುಚ್ಚಾಲೆ

ವಿಜಯವಾಣಿ ಸುದ್ದಿಜಾಲ ಹುಬ್ಬಳ್ಳಿ

ಇಲ್ಲಿನ ರೈಲ್ವೆ ನಿಲ್ದಾಣದಲ್ಲಿ ಸೋಮವಾರ ರಾತ್ರಿ ಅರ್ಧ ಗಂಟೆಗೂ ಹೆಚ್ಚು ಸಮಯ ಕತ್ತಲೆ ಆವರಿಸಿತ್ತು. ರಾತ್ರಿ ಸುಮಾರು 7.30ರಿಂದಲೇ ನಿಲ್ದಾಣದಲ್ಲಿ ವಿದ್ಯುತ್ ಸಂಪರ್ಕ ಕಡಿತಗೊಂಡಿತ್ತು. ಇದರಿಂದಾಗಿ ನಿಲ್ದಾಣದ ಆವರಣದಲ್ಲಿದ್ದ ರೈಲುಗಳ ಸಂಚಾರದ ವೇಳಾಪಟ್ಟಿಯ ಸೂಚನಾ ಫಲಕವೂ ಸ್ಥಗಿತಗೊಂಡಿತ್ತು.

ಈ ಸಮಯದಲ್ಲಿ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಇದ್ದಿದ್ದರಿಂದ ಗೊಂದಲದ ಪರಿಸ್ಥಿತಿ ನಿರ್ಮಾಣಗೊಂಡಿತ್ತು. ಟಿಕೆಟ್ ಕೌಂಟರ್‌ಗಳಲ್ಲಿ ಸಹ ಪ್ರಯಾಣಿಕರ ಸಂಖ್ಯೆ ಹೆಚ್ಚಿದ್ದು, ಕತ್ತಲೆಯಲ್ಲಿಯೇ ಹಣ ನೀಡಿ, ಟಿಕೆಟ್ ಪಡೆಯುವ ಅನಿವಾರ್ಯತೆ ಕಂಡಿತು. ನಿಲ್ದಾಣದ ಹೊರಗಡೆಯೂ ಬೀದಿ ದೀಪಗಳಿಲ್ಲದೇ ಪಾದಚಾರಿ ಪ್ರಯಾಣಿಕರು ಮುಖ್ಯ ರಸ್ತೆ ತಲುಪಲು ತೊಂದರೆ ಪಡಬೇಕಾಯಿತು.

ಮಧ್ಯೆ ಒಂದೆರೆಡು ಬಾರಿ ವಿದ್ಯುತ್ ಪೂರೈಕೆ ಪ್ರಾರಂಭಗೊಂಡು, ಮರುಕ್ಷಣದಲ್ಲಿಯೇ ಸ್ಥಗಿತಗೊಂಡಿತು. ರೈಲ್ವೆ ನಿಲ್ದಾಣದ ಒಳಗಡೆ ಇದ್ದ ತಾತ್ಕಾಲಿಕ ವಿದ್ಯುತ್ ದೀಪಗಳ ವ್ಯವಸ್ಥೆ ಆವರಣದಲ್ಲಿಯೂ ಅಳವಡಿಸಬೇಕೆಂಬ ಒತ್ತಾಸೆ ಇದೇ ಸಂದರ್ಭದಲ್ಲಿ ಪ್ರಯಾಣಿಕರಿಂದ ಕೇಳಿಬಂದಿತು. ವಿದ್ಯುತ್ ಕಣ್ಣುಮುಚ್ಚಾಲೆಯಿಂದಾಗಿ ತೊಂದರೆಗೀಡಾದ ಪ್ರಯಾಣಿಕರು ರೈಲ್ವೆ ಇಲಾಖೆ ವಿರುದ್ಧ ಗೊಣಗುತ್ತಲೇ ಹೆಜ್ಜೆ ಹಾಕುತ್ತಿದ್ದರು.

Due to power failure the Hubballi Railway station is under darkness up to 8pm yesterday.

डेक्कन हेराल्ड / हुबली
DECCAN HERALD/HUBLI.
03 APR 2018.

# Praveen's century spurs RWF

BENGALURU, DHNS: Praveen's century propelled Rail Wheel Factory Sports Association to a big 114-run win over HAL Sports Club in the KSCA Group II, Division I cricket tournament here.

Praveen struck 100 and had good support from Harmain Ahmed, who hit 64 as the Railmen posted a modest 264 in 38.3 overs. Manjunath M (4/51) and Manjunath N (3/52) took three wickets each for HAL Sports Club.

Pranesh Desai then did the damage, claiming four wickets (4/40), with help from Ahmed (2/29) and Akshay CK (2/13), to bowl out HAL SC for 150 in 33.3 overs and secure an easy win.

**Brief scores:** Rail Wheel Factory Sports Association: 264 all out in 38.3 overs (Harmain Ahmed 64, Praveen Kumar 100, Manjesh Reddy 27; Manjunath M 4-51, Manjunath N 3-52) bt HAL Sports Club: 150 all out in 33.3 overs (Sambaji 36, Bhaskar J 26, Dilip 31; Harmain Ahmed 2-29, Pranesh Desai 4-40, Akshay CK 2-13).

South Western Railway Institute, Mysore: 227/8 in 40 overs (Vittal Habib 28, Nitin Bhille 72, Nilesh 63; Koushik 3-32, Sharan 3-58) lt to Central Excise & Customs: 228/7 in 38.4 overs (Samarth R 92, Sandeep 33, Vijay 37 n.o.; Prateek 5-30).

ब्युसिनेस्स लैन / बेंगलूर
BUSINESS LINE/BANGALORE
03 APR 2018

# From metro coaches to warships, Titagarh hits the fast track

## The plan is to design in Europe, partly manufacture in India and finish in the Continent, for marketing worldwide: MD

**PRATIM RANJAN BOSE**

Kolkata, April 2

Wagon-manufacturing was never new to Kolkata. So when Umesh Chowdhary, then 23, set up Titagarh Wagons (TWL) in 1998, there was nothing exceptional to it. Neither did many take note when Titagarh made a string of acquisitions in India and abroad to aggregate technologies.

Its entry into EMU (electric multiple unit) passenger coach-making in 2010 did raise a few eyebrows. But the moment of reckoning came in 2016, when TWL lost the Nagpur metro coach tender to a State-owned Chinese firm by a ₹1-crore margin.

Unlike other Indian participants, which are either foreign-owned or have tied up with a foreign major, TWL owns its Italian technology partner Firema. "We didn't like to be a glorified agent of a foreign manufacturer. So we went for strategic acquisitions," said Chowdhary, Vice-Chairman and Managing Director, Titagarh Group.

And the strategy is paying. In 2017, TWL bagged a ₹175-crore contract for manufacturing four specialised vessels for the Navy and the National Institute of Ocean Technology, defeating industry biggies such as Garden Reach Shipbuilders and Engineering, and Reliance Defence.

The ground for entry into high-value ship building was laid in 2012 with the acquisition of Corporated Shipyard, in Kolkata.

But Chowdhary is not content. "Our plan definitely is to make warships. We have already got approval for warships. It will take time. But if you look at our history, we don't look short term," he told *BusinessLine*.

With four factories each in India (three in West Bengal and one in Rajasthan) and Europe (three passenger rolling stock units in Italy and one freight rolling stock unit in France), 2,700 employees (2,100 in India and 600 in Europe), and a consolidated income of ₹1,768 crore in March 2017, Titagarh Group is emerging a key player in the railways, urban transport and defence sectors.

Apart from vessels, the group supplies nuclear and biological warfare shelters (from TWL), missile canisters (from Cimmco) and bailey bridges to the defence sector. Chowdhary expects the defence business profile to improve over the next five years.

In the railways and urban mass rapid transport segment, the company is focussing on wagon-manufacturing in India and France, and metro coach-manufacturing in India and Italy. If everything goes according to plan, the Indian business will witness exponential growth, riding both on Indian Railways' purchases and global marketing.

### Railway orders are back

After nearly a three-year hiatus, the Railways is back with rolling stock purchase orders. "In 2016-17, the Railways contributed only ₹300 crore to the group's turnover shared between TWL and Cimmco. As of February 2018, we had a railway order book of ₹1,300 crore, most of which will be executed in 2018-19."

One definite impact of it will be felt on Cimmco. Acquired from SK Birla Group eight years ago, the ₹122-crore wagon-maker had been making losses for the past three years, due to over-dependence on railway orders. Chowdhary expects it to break even in FY19.

He is also hopeful that the railway order book position will continue to be robust as the Railways has heavily invested in track capacity expansion and debottlenecking over the past five years. To ensure return of investments, the firm now has to acquire freight rolling stock for higher capacity utilisation.



Umesh Chowdhary, Vice-Chairman and Managing Director, Titagarh Group DEBASISH BHADURI

Over and above the Indian Railways orders, Chowdhary is setting his sight on tapping the worldwide demand for rolling stock and metro coaches through Titagarh Wagons AFR of France and Titagarh Firema Adler of Italy, which will also boost Indian business.

"Our plan is to design in Europe, partly manufacture in India and finish in Europe, for marketing around the world," he said. As part of that, the company has spearheaded a project to improve the production processes at its coach-manufacturing facility at Uttarpara, near Kolkata.

"I expect exports to be higher. But to reach that goal, we have to change a lot to be acceptable in the world market. Over the next 12 months, we will make our Uttarpara unit a centre of excellence with all standard European approvals in place."

### Improving bottomline

As of March 2017, Titagarh Group earned a consolidated net profit of ₹27 crore; EBIDTA stood at ₹140 crore.

The group's aggressive business expansion strategy over the past 10 years has had a role to play in it. For example, in 2014, it won a coach refurbishment order for Kolkata metro at a throwaway price.

"Commercially, that contract was a disaster. But we did it to get a foothold in the sector and let my people understand what is behind a metro coach," Chowdhary said.

While face value of acquisitions remained low, they were designed to have trailing effects. Chowdhary said the group took a €six-million (₹48 crore) hit in October-December 2017 on account of the Firema acquisition in 2015 (due to settlement of disputed contract obligations).

"We paid €one million for Firema which had a gross block of €300 million. We didn't take any of their financial liabilities. All my acquisitions are like that. But I took other troubles. For example, Firema had an order book of €228 million; of this, about €180 million was disputed. We resolved each and every dispute."

The aggregate outgo on account of settling disputed contracts of Firema was "less than 10 per cent of the gross block (€300 million)". On the brighter side, the turnover of Titagarh Firema Adler improved from €30 milllion to €137 million in the first year of operation.

Chowdhary is not planning any fresh acquisition at this juncture. "Over the next couple of years, I will be stabilising the business."

दि हिन्दु/मंगलूर
THE HINDU/MANGALORE
03 APR 2018

# *Right on track*



**Hard at work:** Railway workers protecting themselves from the hot sun while on duty in Coimbatore on Monday. ■ M. PERIASAMY

दि हिन्दु/मंगलूर
THE HINDU/MANGALORE
03 APR 2018



**Up in arms:** Members of Dalit organisations blocking a train in Nagpur on Monday. ▪S. SUDARSHAN